**ಟ್ರಾಫಿಕ್ ಅವ್ಯವಸ್ಥೆ**

ಉದ್ಯಾನನಗರಿ ಬೆಂಗಳೂರಿನ ಆಧುನಿಕತೆಯ ಸೌಂದರ್ಯವನ್ನು ಕಾಣಬೇಕಾದರೆ ಅದು ಕೇವಲ ದೇಶದ ಪ್ರಧಾನಮಂತ್ರಿಯ ಆಗಮನವೋ ರಾಷ್ಟ್ರಾಧ್ಯಕ್ಷರ ಭೇಟಿಯ ಕಾಲವೋ ಆಗಿದ್ದರೆ ಮಾತ್ರ ಸಾಧ್ಯ. ಏಕೆಂದರೆ ಎಷ್ಟೋ ಕಾಲದಿಂದ ದುರಸ್ತಿಯಿಲ್ಲದೇ ಇದ್ದ ನಗರದ ರಸ್ತೆಗಳು ದುರಸ್ತಿಯಾಗುತ್ತವೆ, ಸುಣ್ಣ ಬಣ್ಣವಿಲ್ಲದೇ ಕಂಗೆಟ್ಟ ಗೋಡೆ,ಕಟ್ಟಡಗಳು ಒಮ್ಮೆಲೆ ರಂಗೇರುತ್ತವೆ.ಬಾಯ್ತೆರೆದುಕೊಂಡ ಹೊಂಡಗಳು ಬಾಯ್ಮುಚ್ಚಿಕೋಳ್ಳುತ್ತವೆ. ಇವೆಲ್ಲಾ ಕಾರ್ಯಗಳೂ ಅನೇಕ ಬಾರಿ ರಾತ್ರೋರಾತ್ರಿ ಪೂರ್ಣಗೊಳ್ಳುತ್ತವೆ. ಇದೇ ರೀತಿಯ ಅದೃಷ್ಟವು ನಗರದ ಬಳ್ಳಾರಿ ರಸ್ತೆಗೆ(ರಾಷ್ಟ್ರೀಯ ಹೆದ್ದಾರಿ, ನಂ ೭) ಇತ್ತೀಚೆಗೆ ಲಭಿಸಿತ್ತು. ಪ್ರಧಾನಮಂತ್ರಿ ನರಸಿಂಹರಾಯರು ಇತ್ತೀಚೆಗೆ ಬೆಂಗಳೂರಿಗೆ ಭೇಟಿನೀಡಿದ್ದಾಗ ಶ್ರವಣಬೆಳಗೊಳದ ಮಹಾಮಸ್ತಾಭಿಷೇಕದಲ್ಲಿ ಪಾಲ್ಗೋಳ್ಳುವುದೇ ಅಲ್ಲದೇ ಬೆಂಗಳೂರಿನ ಸಮೀಪದ ಯಲಹಂಕದಲ್ಲಿ ಏರ್ಪಡಿಸಲಾಗಿದ್ದ ಅಂತರರಾಷ್ಟ್ರೀಯ ವಿಮಾನ ಪ್ರದರ್ಶನ 'ಏವಿಯಾ ಇಂಡಿಯಾ-೭೩' ರ ಸಮಾರೋಪದಲ್ಲಿಯೂ ಸಹ ಭಾಗವಹಿಸುವ ಕಾರ್ಯಕ್ರಮವಿತ್ತು. ಇದೇ ನೆಪದಲ್ಲಿ ಬೆಂಗಳೂರು ಯಲಹಂಕದ ರಸ್ತೆಗೆ ಕಾಯಕಲ್ಪವಾಯಿತು. ಈ ಹಿಂದೆ ಬೆಂಗಳೂರಿನ 'ಸಾರ್ಕ್' ಸಮ್ಮೇಳನವು ನಡೆದಾಗಲೂ ಇದೇ ರಸ್ತೆಯನ್ನು ನಂದಿಬೆಟ್ಟದವರೆಗೆ ದುರಸ್ತಿಗೊಳಿಸಲಾಗಿತ್ತು.

ಅದೇ ರೀತಿ ಈ ಬಾರಿಯೂ ಪ್ರಧಾನಿಯ ಆಗಮನದ ನಿರೀಕ್ಷೆಯಲ್ಲಿ ರಸ್ತೆಯನ್ನು ಸಜ್ಜುಗೊಳಿಸಲಾಯಿತು. ಈ ಹಿಂದೆ ಯಲಹಂಕ ಪೋಲೀಸ್ ಸ್ಟೇಷನ್ ಎದುರು ಮೂರು ಪ್ರಮುಖರಸ್ತೆಗಳು (ರಾಷ್ಟ್ರೀಯ ಹೆದ್ದಾರಿ, ನಂ ೭, ರಾಜ್ಯ ಹೆದ್ದಾರಿ ೪ ಮತ್ತು ಬೆಂಗಳೂರು-ಯಲಹಂಕರಸ್ತೆಗಳು)ಕೂಡುವ ಜಾಗದಲ್ಲಿದ್ದ ವೃತ್ತವನ್ನು ತೆಗೆದು ಟ್ರಾಫಿಕ್ ಲೈಟಗಳನ್ನು ಹಾಕಲಾಯಿತು.ಇವೆಲ್ಲಾ ವ್ಯವಸ್ತೆಗಳನ್ನು ಮಾಡಿದ್ದರೂ ಕಾರ್ಯಕ್ರಮಗಳ ಒತ್ತಡದಿಂದ ಪ್ರಧಾನಿಗಳು ಯಲಹಂಕಕ್ಕೆ ಭೇಟಿನೀಡಲಾಗಲಿಲ್ಲ.ಆದರೆ ಪ್ರಧಾನಿಗಳ ಆಗಮನದ ನೆಪದಲ್ಲಿ ನಿರ್ಮಿಸಲಾದ ಟ್ರಾಫಿಕ್ ಸಿಗ್ನಲ್ ವ್ಯವಸ್ತೆಯು ಯಲಹಂಕ ವೃತ್ತದ ಬಳಿ ಹರಿದುಬರುತ್ತಿದ್ದ ಅತ್ಯಧುನಿಕ ವಾಹನ ಸಂಚಾರವನ್ನು ನಿಯಂತ್ರಿಸಬಹುದೇನೋ ಎಂಬ ನಿರೀಕ್ಷೆ ಜನರಿಗಿತ್ತು.ಆದರೆ ಈ ಟ್ರಾಫಿಕ್ ಸಿಗ್ನಲಗಳನ್ನು ಇನ್ನೂ ಚಾಲನೆಗೊಳಿಸಿಲ್ಲ. ಈಗ ಪೋಲೀಸ್ ಸ್ಟೇಷನ್ ಎದುರು ವೃತ್ತವೂ ಇಲ್ಲದಿರುವ ಕಾರಣ ಹೆಚ್ಚಿನ ಟ್ರಾಫಿಕ್ ಅವ್ಯವಸ್ಥೆಗೆ ಕಾರಣವಾಗಿದೆ. ಹಾಗೂ ಅಪಘಾತಗಳ ತಾಣವಾಗಿ ಪರಿಣಮಿಸಿದೆ. ಒಂದೆಡೆ ಟ್ರಾಫಿಕ್ ಸಿಗ್ನಲಗಳ ಸರಿಯಾದ ಚಾಲನೆಗೆ ಪೋಲೀಸ್ ಠಾಣೆಯಿದ್ದರೆ, ಇನ್ನೊಂದೆಡೆ ನಿರಂತರವಾದ ವಿದ್ಯುಚ್ಛಕ್ತಿ ಸರಬರಾಜು ಮಾಡಲು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಕಛೇರಿಯಿದೆ. (ಹೀಗಿದ್ದೂ ಟ್ರಾಫಿಕ್ ಸಿಗ್ನಲಗಳನ್ನು ಚಾಲನೆಮಾಡುತ್ತಿಲ್ಲ) ಮೊದಲೇ, ಯಲಹಂಕ ಪೋಲೀಸ್ ಠಾಣೆಗೆ ಸ್ವಲ್ಪವೇ ಅಂತರದಲ್ಲಿರುವ ಅಡ್ಡಸೇತುವೆಯಿಂದ ವಾಹನಗಳು ಒಂದು ಕಿ.ಮೀ. ನಷ್ಟು ದೂರದವರೆಗೆ ನಿಲ್ಲುವ ಪರಿಸ್ಥಿತಿಯಿತ್ತು. ಈಗ ಪರಿಸ್ಥಿತಿಯು ಇನ್ನಷ್ಟು ಬಿಗಡಾಯಿಸಿದೆ. ಈಗ ಬೆಂಗಳೂರು ಟ್ರಾಫಿಕ್ ಪೋಲೀಸ್ ಇಲಾಖೆಗೆ ಈ ಜಾಗದಲ್ಲಿ ಟ್ರಾಫಿಕ್ ನಿಯಂತ್ರಿಸಲು, ಅಪಘಾತಗಳನ್ನು ತಪ್ಪಿಸಲು ಎರಡು ಮಾರ್ಗಗಳಿವೆ. ಒಂದು ಟ್ರಾಫಿಕ್ ಸಿಗ್ನಲಗಳನ್ನು ಚಾಲನೆಯಲ್ಲಿಟ್ಟು ಪೋಲೀಸ್ ಅಧಿಕಾರಿಗಳನ್ನು ಅಲ್ಲಿ ನಿರ್ವಹಣೆಗೆ ನಿಲ್ಲಿಸುವುದು ಅಥವಾ ಎರಡು, ವೃತ್ತವನ್ನು ಮತ್ತೊಮ್ಮೆ ನಿರ್ಮಿಸಿ ಯಥಾಸ್ಥಿತಿಯನ್ನು ಕಾಪಾಡುವುದು. ವಾಹನ ಚಾಲಕರ ಜೀವನ್ಮರಣದ ಈ ವಿಚಾರವನ್ನು ಗಮನಿಸಿ ಸೂಕ್ತ ವ್ಯವಸ್ತೆಯನ್ನು ಟ್ರಾಫಿಕ್ ಇಲಾಖೆಯು ಮಾಡುವುದೇ?

Jan 20th 1994 Hosa Diganta Traffic Avyavaste.